ಕೇಷನ್ ಫೈಲ್ ಮಾಡುತ್ತಾನೆ. ಯಾವುದೂ ಹಾಸ್ಪೆಲ್ ಇರಲಿಲ್ಲ, ಪ್ರೈವೇಟ್ ಆಗಲೀ, ಗೌರ್ನಮೆಂಟ್ ಆಗಲೀ ವ್ಯವಸ್ಥೆ ಮಾಡಲಿಲ್ಲ ಎಂದರೆ ಅವನು ಬರೀ ಚೆಕ್ ತೆಗೆದುಕೊಂಡು ಏನು ಮಾಡುತ್ತಾನೆ ? ತಿಂಗಳ ಕೊನೆಯಲ್ಲಿ ಚೆಕ್ ಬಂದಾಗ ಐದು ಆರು ದಿನದಲ್ಲಿ ಖರ್ಚು ಮಾಡಿಕೊಂಡು ಉಪವಾಸ ಬಿದ್ದು, ಮತ್ತೆ ತನ್ನ ಊರಿಗೆ ಹೋಗತಕ್ಕಂಥ ಪರಿಸ್ಥಿತಿ ಆಗುತ್ತದೆ. ೨೫೦ ರೂಪಾಯಿ ಹಣ ಅಲ್ಲಿಂದ ಬಿಡುಗಡೆ ಯಾಗುವವರೆಗೆ ನೀವೇ ಅಡ್‌ಹಾಕ್ ಬೇಸಿಸ್ ಮೇಲೆ ಪರ್ ಹೆಡ್ ೨೫೦ ರೂಪಾಯಿನಂತೆ ರಿಲೀಸ್ ಮಾಡಿ. ಎಲ್ಲೆಲ್ಲಿ ಕಾಲೇಜು ಬಾಯ್ಸ್ ಹಾಸ್ಟೆಲ್‌ಗಳು ಇಲ್ಲವೋ, ಅಲ್ಲಿ ಸರ್ಕಾರವೇ ಏತಕ್ಕೆ ವ್ಯವಸ್ಥೆ ಮಾಡಬಾರದು ?

ಶ್ರೀ ಜಿ. ಬಸವಣ್ಣೆಪ್ಪ.—ಈ ಬಗ್ಗೆ ಬೀದರ್‌ನ ವಿದ್ಯಾರ್ಥಿಗಳು ನನ್ನನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿಯನ್ನು ಸಲ್ಲಿಸಿ ಹೋಗಿದ್ದಾರೆ. ಸರ್ಕಾರವೇ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಮಂಗಳೂರು ಭೂ ನ್ಯಾಯ ಮಂಡಲಿಗೆ ವಾಹನವನ್ನೊದಗಿಸುವುದು.

೨೬೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಹಾಗೂ ಯೋಜನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ಮಂಗಳೂರು ಭೂನ್ಯಾಯ ಮಂಡಳಿಯಲ್ಲಿ ಸ್ಥಳ ತನಿಖೆಗೆ ಹೆಚ್ಚಿನ ಪ್ರಕರಣಗಳು ಇರುವುದರಿಂದ ಈ ನ್ಯಾಯ ಮಂಡಳಿಗೆ ವಾಹನವನ್ನು ಒದಗಿಸಲಾಗಿದೆಯೆ ?

ಆ) ಸ್ಥಳ ತನಿಖೆಗೆ ವಾಹನದ ಅತ್ಯಗತ್ಯ ಇರುವುದರಿಂದ ಸ್ವಂತ ಜೀಪನ್ನು ಒದಗಿಸಲಾಗುವುದೇ ಅಥವಾ ವಾರಕ್ಕೆ ಎರಡು ಭಾರಿ ಇನ್ನಿತರ ಇಲಾಖೆಯ ವಾಹನ ಸಿಗುವಂತೆ ಕಡ್ಡಾಯವಾಗಿ ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಇಲ್ಲ.

ಆ) ಪ್ರತ್ಯೇಕ ವಾಹನವನ್ನು ಒದಗಿಸಿಲ್ಲ. ಅವಶ್ಯ ಕಂಡಂ ಬಂದರೆ, ಪರಿಶೀಲಿಸಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಬಗ್ಗೆ ಖುದ್ದಾಗಿ ನನ್ನಲ್ಲಿ ಬಂದು ಮಾತನಾಡಿದ್ದಾರೆ. ಈ ಬಗ್ಗೆ ನಾನು ವಾರದಲ್ಲಿ ಎರಡು ಸಲವಾದರೂ ವಾಹನವನ್ನು ಮಂಗಳೂರು ಟ್ರಿಬ್ಯುನಲ್‌ಗೆ ಒದಗಿಸಿಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ಬಗ್ಗೆ ಅಧಿಕಾರಿಗಳು ಈಗಾಗಲೇ ಕ್ರಮ ತೆಗೆದುಕೊಂಡಿರಬಹುದು. ಕ್ರಮ ತೆಗೆದುಕೊಂಡಿಲ್ಲದಿದ್ದರೆ ನಾನು ಆದೇಶ ನೀಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರದಿಂದ ನನಗೆ ಸಂತೋಷವಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿಯೇ ಹೆಚ್ಚು ಕೇಸುಗಳು ಬಾಕಿ ಇವೆ. ಅಲ್ಲಿ ಸುಮಾರು ೪ ಸಾವಿರ ಕೇಸ್‌ಗಳು ಪೆಂಡಿಂಗ್ ಇರಬಹುದು. ಒಂದು ತಿಂಗಳಲ್ಲಿ ೪೦–೫೦ ಕೇಸ್‌ಗಳನ್ನು ತೀರ್ಮಾನ ಮಾಡಬಹುದು, ಆದರೂ ಬಾಕಿ ಇವೆ. ಇದಕ್ಕೆಲ್ಲಾ ಕಾರಣ ವಾಹನ ವಿಲ್ಲದೆ ಸ್ಥಳ ಪರಿಶೀಲನೆಯಾಗದೆ ಇರುವುದೇ ಮೂಲ ಕಾರಣ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ರಾಜ್ಯದ ಅನೇಕ ಭೂ ನ್ಯಾಯ ಮಂಡಲಿಗಳು ಜಮೀನನ್ನು ಸರ್ವೆ ಮಾಡದೆ ತೀರ್ಪು ಕೊಟ್ಟಿರತಕ್ಕ ಅನೇಕ ಪ್ರಕರಣಗಳು ಇವೆ. ಇವುಗಳನ್ನು ಮರು ವಿಚಾರಣೆ ಮಾಡುವುದಕ್ಕೆ ಭೂ ನ್ಯಾಯ ಮಂಡಲಿಗಳಿಗೆ ಹಕ್ಕು ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಕಾನೂನು ಅಭಿಪ್ರಾಯವನ್ನು ತೆಗೆದುಕೊಂಡು ಉತ್ತರ ಹೇಳುತ್ತೇನೆ.